ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎ.ಸಿ.ಜೆ.ಎಂ. ನ್ಯಾಯಾಲಯ,
ಉಡುಪಿ.

ಸಿ.ಸಿ.:1/2021
ಸಿ.ಡಬ್ಲ್ಯು.5 ಪಿ.ಡಬ್ಲೂ : 4

| | |
|---|---|
| ಸಾಕ್ಷಿದಾರರ ಹೆಸರು | ಮಹೇಶ್ |
| ತಂದೆಯ ಹೆಸರು | ನಂಜೇಗೌಡ |
| ವಯಸ್ಸು | 48 ವರ್ಷ |
| ಉದ್ಯೋಗ | ಭೂ ವಿಜ್ಞಾನಿ |
| ವಾಸಸ್ಥಳ | ಮಂಗಳೂರು. |

ದಿನಾಂಕಃ 02.08.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದಃ

ದಿನಾಂಕ 09.10.2014 ರಿಂದ ದಿನಾಂಕ 14.07.2021 ರವರಗೆ ಉಡುಪಿಯ ಜಿಲ್ಲಾ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಲ್ಲಿ ಭೂ ವಿಜ್ಞಾನಿಯಾಗಿ ಕೆಲಸ ನಿರ್ವಹಿಸಿರುತ್ತೇನೆ. ದಿನಾಂಕ 14.03.2019 ರಂದು ಕಾಪು ತಾಲ್ಲೂಕಿನ ಮಾನ್ಯ ತಹಶೀಲ್ದಾರ್ ರವರು ಕರೆ ಮಾಡಿ ಹೆಜಮಾಡಿ ಚೆಕ್ ಪೋಸ್ಟ್ ನಲ್ಲಿ ಅಕ್ರಮವಾಗಿ ಮರಳು ಸಾಗಿಸುತ್ತಿದ್ದ ಲಾರಿಯನ್ನು ತಡೆ ಹಿಡಿದಿದ್ದು ಅದರ ವಿರುದ್ದ ಕಾನೂನು ರೀತಿಯ ಕೇಸು ದಾಖಲಿಸುವಂತೆ ತಿಳಿಸಿದರು. ಅದೇ ದಿನ ಸಂಜೆ 4.30 ರ ಸಮಯಕ್ಕೆ ನಾನು ಪಡುಬಿದ್ರಿ ಪೋಲೀಸ್ ಠಾಣೆಗೆ ಭೇಟಿ ಮಾಡಿದೆನು, ಆ ವೇಳೆ ಚಾ.ಸಾ.1 ರವರು ಇದ್ದರು. ಮರಳಿನ ಪ್ರಮಾಣವನ್ನು ಪರಿಶೀಲನೆ ಮಾಡುವ ಸಲುವಾಗಿ ಕೆಎ-20-ಎ-6963 ಸಂಖ್ಯೆ ಲಾರಿಯನ್ನು ನೋಡಲಾಯಿತು. ಷದ್ರಿ ವಾಹನದಲ್ಲಿ ಮರಳು ಇರುವುದು ಕಂಡುಬರಲಿಲ್ಲ. ಚಾ.ಸಾ.1 ರವರನ್ನು ಈ ಬಗ್ಗೆ ವಿಚಾರಿಸಿದಾಗ ಅವರು ಹೆಜಮಾಡಿ ಚೆಕ್ ಪೋಸ್ಟ್ ನಿಂದ ಲಾರಿಯನ್ನು ಕಳುಹಿಸುವಾಗ ಮರಳು ಇತ್ತು ಅದರೊಂದಿಗೆ ಜೀವನ್ ಎಂಬ ಹೆಚ್.ಜಿ. ಯವರನ್ನು ಕಳುಹಿಸಲಾಗಿತ್ತು, ಈಗ ಮರಳು ಇರುವುದಿಲ್ಲ ಈ ಬಗ್ಗೆ ನಾನು ದೂರು ಸಲ್ಲಿಸುತ್ತೇನೆಂದು ತಿಳಿಸಿದರು. ಈ ವಿಷಯವನ್ನು ಮಾನ್ಯ

ತಹಶೀಲ್ದಾರ್ ರವರಿಗೆ ಕರೆ ಮಾಡಿ ತಿಳಿಸಿದೆವು. ಈ ಬಗ್ಗೆ ಪೋಲೀಸಿನವರು ನನ್ನನ್ನು ವಿಚಾರಣೆ ಮಾಡಿದ್ದು, ಹೇಳಿಕೆಯನ್ನು ನೀಡಿರುತ್ತೇನೆ. ಸಾಕ್ಷಿಯವರು ಒಂದು ಭಾವಚಿತ್ರವನ್ನು ನೋಡಿ ನಾವು ಆ ದಿನ ಪರಿಶೀಲಸಿಸಿದ ಲಾರಿ ಇದೇ ಎಂದು ಗುರ್ತಿಸಿದ್ದು ಅದನ್ನು ಈಗಾಗಲೇ ನಿಪಿ.1 ಎಂದು ಗುರ್ತಿಸಲಾಗಿದೆ.

ಪಾಟೀ ಸವಾಲುಃ 3 ಮತ್ತು 6 ನೇ ಆರೋಪಿಯವರ ಪರವಾಗಿ ಶ್ರೀ ಎಸ್.ಎ. ವಕೀಲರವರಿಂದಃ

ಆ ದಿನ ಲಾರಿಯಲ್ಲಿ ಮರಳು ಇತ್ತು ಎಂದು ತೋರಿಸುವ ಯಾವುದಾದರೂ ದಾಖಲೆಯನ್ನು ನಿಮಗೆ ನೀಡಿರುತ್ತಾರೆಯೇ ಎಂದರೆ ಇಲ್ಲ. ನಿಮಗೆ ವಿಷಯಗಳನ್ನು ಯಾರು ತಿಳಿಸಿದರು ಎಂದರೆ ಕಾಪುವಿನ ತಹಶೀಲ್ದಾರ್ ರವರು ತಿಳಿಸಿದರು. ಪೋಲೀಸ್ ಠಾಣೆಗೆ ಬರುವಂತೆ ನಿಮಗೆ ಲಿಖಿತವಾದ ಮನವಿಯನ್ನು ಸಲ್ಲಿಸಿರುತ್ತಾರೆಯೇ ಎಂದರೆ ಇಲ್ಲ. ಮರಳಿನ ತೂಕದ ಬಗ್ಗೆ ತಹಶೀಲ್ದಾರ್ ರವರು ಯಾವುದಾದರೂ ದಾಖಲೆಯನ್ನು ನಿಮಗೆ ಒದಗಿಸಿರುತ್ತಾರೆಯೇ ಎಂದರೆ ಇಲ್ಲ. ಲಾರಿಯಲ್ಲಿ ಇತ್ತು ಎಂದು ಹೇಳುವ ಮರಳನ್ನು ನೀವು ನೋಡಿರುತ್ತೀರಾ ಎಂದರೆ ಇಲ್ಲ. ತಹಶೀಲ್ದಾರ್ ರವರು, ಪೋಲೀಸಿನವರು ಮತ್ತು ಗ್ರಾಮ ಲೆಕ್ಕಾಧಿಕಾರಿಯವರು ಎಲ್ಲರೂ ಸೇರಿ ಆರೋಪಿತರ ವಿರುದ್ಧ ಸುಳ್ಳು ಕೇಸ್ ನ್ನು ದಾಖಲಿಸಿದ್ದು ಅವರ ಒತ್ತಾಯಕ್ಕೆ ಮಣಿದು ನೀವು ಸುಳ್ಳು ಸಾಕ್ಷ್ಯವನ್ನು ಹೇಳುತ್ತಿದ್ದೀರಿ ಎಂದರೆ ಇಲ್ಲ. ನೀವು ಹೋಗಿರುವುದೇ ಇಲ್ಲ ಹಾಗೂ ಯಾವುದೇ ವಾಹನವನ್ನು ಪರಿಶೀಲನೆ ಮಾಡಿರುವುದೂ ಇಲ್ಲ ಆದರೂ ಸುಳ್ಳು ಹೇಳುತ್ತಿದ್ದೀರಿ ಎಂದರೆ ಇಲ್ಲ.

ಮರು ವಿಚಾರಣೆಃ ಇಲ್ಲ.

(ತೆರದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಎಂದು ಒಪ್ಪಿದ್ದೇನೆ.

ಹೆ.ಹಿ.ಸಿ.ನ್ಯಾ ಮತ್ತು ಎಸಿಜೆಎಂ
ಉಡುಪಿ.